**Golden Resrach Thoughts**
**Vol -2 , ISSUE –IX, March - 2013**
**ISSN No-2031-5063**
Available online at www.aygrt.isrj.org

ORIGINAL ARTICLE

# ಕುವೆಂಪು ಮತ್ತು ಮಂದಾರ ಕೇಶವ ಭಟ್ಟರು ಚಿತ್ರಿಸಿದ ಲಕ್ಷ್ಮಣ ಮತ್ತು ಊರ್ಮಿಳೆ

**ಡಾ ಶಂಕರ ಭಟ್ ಪಿ**
ಕನ್ನಡ ಸಹ ಪ್ರಾಧ್ಯಾಪಕರು ಸರಕಾರಿ ಪ್ರಥಮ ದರ್ಜೆ ಕಾಲೇಜು ವಿಟ್ಲ, ದ.ಕ. ಜಿಲ್ಲೆ.

ವಾಲ್ಮೀಕಿ ರಾಮಾಯಣದಲ್ಲಿ ಭ್ರಾತೃ ಪ್ರೇಮಕ್ಕೆ ಪ್ರತೀಕವಾದವನು ಲಕ್ಷ್ಮಣ. ಅವನು ಶೂರ್ಪನಖಿಗೆ ಅವಮಾನ ಮಾಡಿದ ಬಗ್ಗೆ ಅನೇಕ ಸಹೃದಯರಿಂದ ಆಕ್ಷೇಪಣೆಗಳಿವೆ. ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ಭ್ರಾತೃ ಪ್ರೇಮಕ್ಕೆ ಪ್ರತೀಕವಾಗಿ ಕುವೆಂಪು ಅವರು ಲಕ್ಷ್ಮಣನ ಪಾತ್ರವನ್ನು ಚಿತ್ರಿಸಿದ್ದಾರೆ. ರಾಮನಿಗೆ ವನವಾಸವೆಂದು ತಿಳಿದಾಗ ಲಕ್ಷ್ಮಣನು, ತಂದೆ ದಶರಥನ ಬಗ್ಗೆ ಸಿಟ್ಟಿನ ಮಾತುಗಳನ್ನಾಡುತ್ತಾನೆ.ಆಗ ರಾಮನಾಡಿದ ಮಾತುಗಳು ಲಕ್ಷ್ಮಣನ ಕೋಪವನ್ನು ಶಮನಗೊಳಿಸುವುದು ಕಂಡುಬರುತ್ತದೆ. ಮಂದಾರ ರಾಮಾಯಣದಲ್ಲಿ ಇದೇ ರೀತಿಯ ಚಿತ್ರಣ ಅಡಕವಾಗಿದೆ. ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ರಾಮನು ಕಾಡಿಗೆ ಹೋಗುವಾಗ ಲಕ್ಷ್ಮಣನು ಅವನನ್ನು ಹಿಂಬಾಲಿಸುತ್ತಾನೆ. ಲಕ್ಷ್ಮಣನು ವನವಾಸಕ್ಕೆ ಹೋಗುವ ವಿಚಾರವನ್ನು ಊರ್ಮಿಳೆಯಲ್ಲಿ ನೇರವಾಗಿ ಹೇಳುವ ಸನ್ನಿವೇಶ ಕಾಣಿಸುವುದಿಲ್ಲ. ಕವಿಯು ಊರ್ಮಿಳೆಯ ಬಗ್ಗೆ ದುಃಖಿಸುವ ಸಂದರ್ಭದಲ್ಲಿ ಮತ್ತು ರಾಮನಿಗೆ ಲಕ್ಷ್ಮಣನು ಹೇಳುವ ಮಾತುಗಳಲ್ಲಿ ಇದು ವ್ಯಕ್ತವಾಗುತ್ತದೆ. ವನವಾಸದಲ್ಲಿದ್ದಾಗ ಒಂದು ರಾತ್ರಿ ರಾಮನು, ಊರ್ಮಿಳೆಯು ಲಕ್ಷ್ಮಣನನ್ನು ಕರೆದು ಗೋಳಾಡುತ್ತಿರುವ ಕನಸನ್ನು ಕಂಡು, ಲಕ್ಷ್ಮಣನನ್ನುಕರೆದು ಈ ವಿಷಯವನ್ನು ಹೇಳಿ, ಅಯೋಧ್ಯೆಗೆ ಹಿಂತಿರುಗುವುದಕ್ಕೆ ಹೇಳುತ್ತಾನೆ. ಆಗ ಲಕ್ಷ್ಮಣನು ನಿನ್ನೊಂದಿಗೆ ಬರುವ ಮೊದಲೇ ಊರ್ಮಿಳೆಯ ಒಪ್ಪಿಗೆ ಪಡೆದು ಬಂದೆನೆಂದು ಹೇಳುವುದು ಕಂಡುಬರುತ್ತದೆ. ಒಂದು ದಿನ ರಾಮನು ಪರ್ಣಶಾಲೆಯೊಳಗೆ ಬಂದಾಗ ಅಲ್ಲಿ ಹೊಗೆ ಆವರಿಸಿರುವ ಕಾರಣ ಸೀತೆ ಕಾಣಿಸುವುದಿಲ್ಲ. ಆಗ ರಾಮನು ಸೀತೆಯನ್ನು ಕುರಿತು ವಿನೋದದಿಂದ ಹಸಿವಾಗಿದೆ ಊಟಬೇಕು ಎನ್ನುತ್ತಾನೆ. ಒಲೆಯಲ್ಲಿ ಬೆಂಕಿ ಉರಿಯದಿದ್ದ ಕಾರಣ, ಒಲೆಗೆ ಊದಿದ ಪರಿಣಾಮವಾಗಿ ಕೈ ಮುಖಗಳಿಗೆ ಮಸಿತಾಗಿದ ಸೀತೆಯು ಆಗ ಹಸಿ ಸೌದೆಯಿಂದ ಅಡುಗೆಯಾಗುತ್ತದೆಯೇ ಎಂದು ಹೇಳುತ್ತಾಳೆ. ಆಗ ರಾಮನು ಸೀತೆಯ ಸಮೀಪ ಬಂದು ಅವಳನ್ನು ನೋಡಿ ನಕ್ಕು,ಲಕ್ಷ್ಮಣನನ್ನು ಕರೆದು ಒಳಗೆ ಅತ್ತಿಗೆಯ ಬದಲು ವಾನರಿಯೊಬ್ಬ ಳನ್ನು ನೋಡೆಂದು ಹೇಳುತ್ತಾನೆ. ಲಕ್ಷ್ಮಣನು ಎದ್ದು ಬಂದು ನಗುವುದಿಲ್ಲ, ಅತ್ತಿಗೆಯ ಈ ಸ್ಥಿತಿಗೆ ಹಸಿ ಸೌದೆ ತಂದ ತಾನೇ ಕಾರಣನೆಂದು ಕ್ಷಮೆಯಾಚಿಸಿ, ಒಣ ಪುಳ್ಳೆಗಳನ್ನು ತಂದು ಮಡದಿಯನ್ನು ನೆನೆದು ಊದಿದಾಗ ಬೆಂಕಿ ಹತ್ತಿಕೊಳ್ಳುತ್ತದೆ. ಲಕ್ಷ್ಮಣನಿಗೆ ಅತ್ತಿಗೆ ಮತ್ತು ಮಡದಿಯ ಬಗ್ಗೆ ಇದ್ದ ಒಳ್ಳೆಯ ಭಾವನೆಗೆ ಈ ಸನ್ನಿವೇಶ ಉದಾಹರಣೆಯಾಗಿದೆ.

ಮಂದಾರ ರಾಮಾಯಣದಲ್ಲಿ ಲಕ್ಷ್ಮಣನು ವನವಾಸಕ್ಕೆ ಹೊರಡುವಾಗ ಊರ್ಮಿಳೆಯು ತಾನು ಬರುತ್ತೇನೆಂದು ಹೇಳುತ್ತಾಳೆ. ಆಗ ಲಕ್ಷ್ಮಣನು ತನ್ನ ತಾಯಿ, ದೊಡ್ಡಮ್ಮನನ್ನು ನೋಡಿಕೊಳ್ಳುವುದಕ್ಕೆ ನೀನು ಇಲ್ಲಿ ನಿಲ್ಲಬೇಕೆಂದು ಹೇಳಿ ಊರ್ಮಿಳೆಯನ್ನು ಒಪ್ಪಿಸುತ್ತಾನೆ. ಮುಂದಿನ ಹದಿನಾಲ್ಕು ವರ್ಷ ಊರ್ಮಿಳೆಯ ಬದುಕಿನ ವಿವರ ಕಾವ್ಯದಲ್ಲಿ ಇಲ್ಲ. ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ಲಕ್ಷ್ಮಣನು ವನವಾಸಕ್ಕೆ ಹೋಗುವ ಮೊದಲು ಮಡದಿ ಊರ್ಮಿಳೆಯ ಕೃಪೆ ಪಡೆದನೆಂಬ ವಿಚಾರವಿದೆ. ಇದು ಲಕ್ಷ್ಮಣನು ರಾವನಿಗೆ ಹೇಳುವ ಮಾತಿನಿಂದ ತಿಳಿಯುತ್ತದೆ. ಪ್ರತ್ಯಕ್ಷವಾಗಿ ಆ ಘಟನೆ ಕಾವ್ಯದಲ್ಲಿ ಬರುವುದಿಲ್ಲ. ಮಂದಾರ ರಾಮಾಯಣದಲ್ಲಿ ವನವಾಸಕ್ಕೆ ಬರುವುದು ಬೇಡವೆಂದು ಊರ್ಮಿಳೆಯನ್ನು ಒಪ್ಪಿಸುವ ಸನ್ನಿವೇಶವಿದೆ. ಕೇಶವ ಭಟ್ಟರ ಈ ಪ್ರತ್ಯಕ್ಷ ಚಿತ್ರಣಕ್ಕಿಂತ ಕುವೆಂಪು ಅವರ ಪರೋಕ್ಷ ಚಿತ್ರಣವು ಸಹೃದಯರ ಮನಸ್ಸನ್ನು ಆಕರ್ಷಿಸುತ್ತದೆ.

**Golden Resrach Thoughts**
**Vol -2 , ISSUE –IX, March - 2013**
**ISSN No-2031-5063** Available online at www.aygrt.isrj.org

ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ರಾಮನಿಂದ ಚಂದ್ರನಖಿಯ ದುರಾಸೆಯ ವಿಚಾರ ತಿಳಿದಾಗ ಲಕ್ಷ್ಮಣನು ಚಂದ್ರನಖಿಯನ್ನು ನೋಡಿ ಸಿಟ್ಟಿನಿಂದ ದೂರ ತೊಲಗೆಂದು ಕೈ ಬೀಸುತ್ತಾನೆ. ಆಗ ಪ್ರಮಾದದಿಂದ ಲಕ್ಷ್ಮಣನ ಕೈಯಲ್ಲಿದ್ದ ಬಾಣವು ಅವಳ ಮುಖವನ್ನು ಸ್ಪರ್ಶಿಸುತ್ತದೆ. ಬಳಿಕ ಭೀಕರ ಆಕಾರವನ್ನು ಪಡೆದ ಚಂದ್ರನಖಿಯ ಮುಖವನ್ನು ಲಕ್ಷ್ಮಣನು ಖಡ್ಗದಿಂದ ಕೆತ್ತುತ್ತಾನೆ. ಲಕ್ಷ್ಮಣನು ಮೊದಲು ಉದ್ದೇಶ ಪೂರ್ವಕವಾಗಿ ಚಂದ್ರನಖಿಗೆ ಏನೂ ಮಾಡಿಲ್ಲವೆಂಬ ಕಾರಣದಿಂದ, ಈ ಸನ್ನಿವೇಶವು ವಾಲ್ಮೀಕಿ ರಾಮಾಯಣ ದ ಸನ್ನಿವೇಶಕ್ಕಿಂತ ಉತ್ತಮವಾಗಿ ಕಾಣಿಸುತ್ತದೆ.

ಮಂದಾರ ರಾಮಾಯಣದಲ್ಲಿ ಅನಾಗರಿಕಳಾಗಿ ವರ್ತಿಸಿದ ಸೂರ್ಪನಖಿಯ ಕಿವಿ, ಮೂಗುಗಳನ್ನು ಲಕ್ಷ್ಮಣನು ಕತ್ತರಿಸುತ್ತಾನೆ. ಇಲ್ಲಿಯೂ ವಿನಾಕಾರಣ ಲಕ್ಷ್ಮಣನು ಸೂರ್ಪನಖಿಗೆ ಏನೂ ಮಾಡುವುದಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ಎರಡು ಕಾವ್ಯಗಳಲ್ಲಿಯೂ ಲಕ್ಷ್ಮಣನ ಪಾತ್ರವು ಕಳಂಕರಹಿತವಾಗಿದೆ. ಮಂದಾರ ರಾಮಾಯಣದಲ್ಲಿ ರಾಮ ಲಕ್ಷ್ಮಣರು ವಿಶ್ವಾಮಿತ್ರನೊಂದಿಗೆ ಮಿಥಿಲೆಗೆ ಬರುವಾಗ ದಾರಿಯಲ್ಲಿ ಕಾಣುವುದಕ್ಕೆ ಸಿಕ್ಕಿದ ರೈತರ ಕಷ್ಟದ ಕುರಿತು ಲಕ್ಷ್ಮಣನು ಮಾತನಾಡುತ್ತಾನೆ. ವಿಶ್ವಾಮಿತ್ರನು ಜನಕನ ಅರಮನೆಯಲ್ಲಿ ಸೀತೆಯ ವಿವಾಹದ ಬಗ್ಗೆ ನಡೆಯುವ ಪಂಥದ ವಿಚಾರ ತಿಳಿಸಿದಾಗ ಆ ಪದ್ಧತಿಯನ್ನು ವಿರೋಧಿಸುವ ಮನೋಭಾವ ಲಕ್ಷ್ಮಣನಲ್ಲಿ ಕಂಡು ಬರುತ್ತದೆ. ಮಿಥಿಲೆಯಲ್ಲಿ ರಾಮನು ಬಿಲ್ಲು ಮುರಿದಾಗ ಇಂದ್ರಜಿತು ಮತ್ತು ಅತಿಕಾಯರು, ಅದನ್ನು ಮೋಸವೆಂದು ಹೇಳುತ್ತಾರೆ. ಆಗ ಸಿಟ್ಟುಗೊಂಡ ಲಕ್ಷ್ಮಣನನ್ನು ರಾಮನು ಸಮಾಧಾನ ಮಾಡುತ್ತಾನೆ. ಈ ಸನ್ನಿವೇಶಗಳು ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ಇಲ್ಲ. ವಾಲ್ಮೀಕಿ ರಾಮಾಯಣ ಕ್ಕಿಂತ ಭಿನ್ನವಾಗಿ ಕುವೆಂಪು ಮತ್ತು ಮಂದಾರ ಕೇಶವ ಭಟ್ಟರು ಲಕ್ಷ್ಮಣನ ಪಾತ್ರವನ್ನು ಚಿತ್ರಿಸಿರುವುದು ಹೀಗೆ ಕಂಡುಬರುತ್ತದೆ. ಕವಿಗಳಿಬ್ಬರು ಕೂಡ ಲಕ್ಷ್ಮಣನ ಪಾತ್ರಕ್ಕೆ ಹೊಸತನವನ್ನು ತಂದಿರುವುದು ಗಮನಾರ್ಹ ವಿಚಾರವಾಗಿದೆ.

ವಾಲ್ಮೀಕಿ ರಾಮಾಯಣ ದಲ್ಲಿ ಊರ್ಮಿಳೆಯ ಪಾತ್ರವು ಅವಳ ವಿವಾಹ ಸಮಯದಲ್ಲಿ ಕಾಣಿಸುತ್ತದೆ. ಆದರೆ ಬಳಿಕ ರಾಮನ ಪಟ್ಟಾಭಿಷೇಕಕ್ಕೆ ವಿಘ್ನವಾದ ಸಂದರ್ಭದಲ್ಲಿ ಲಕ್ಷ್ಮಣನು ರಾಮನೊಂದಿಗೆ ವನವಾಸಕ್ಕೆ ಹೋಗುವಾಗ, ಊರ್ಮಿಳೆಯ ಪ್ರತಿಕ್ರಿಯೆ ಏನಿತ್ತೆಂದು ತಿಳಿಯುವುದಿಲ್ಲ. ಹಾಗಾಗಿ ವಾಲ್ಮೀಕಿ ರಾಮಾಯಣ ದಲ್ಲಿ ಊರ್ಮಿಳೆಯ ಪಾತ್ರವು ಅನಾದರಕ್ಕೆ ಒಳಗಾಗಿದೆ ಎಂದು ಕವಿ ರವೀಂದ್ರನಾಥ ಠಾಗೋರ್ ಅವರು ವಿಮರ್ಶಿಸಿದ್ದಾರೆ. ಇದನ್ನು ಗಮನಿಸಿ ಕುವೆಂಪು ಅವರು ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ಊರ್ಮಿಳೆಯ ಪಾತ್ರಕ್ಕೆ ಅನಾದರವಾಗದಂತೆ ಚಿತ್ರಿಸಿದ್ದಾರೆ. ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ಊರ್ಮಿಳೆಯ ಪಾತ್ರವು ನೇರವಾಗಿ ಕಾಣಿಸುವುದು ಮೂರು ಸಂದರ್ಭಗಳಲ್ಲಿ ಮಾತ್ರ. ಕಾವ್ಯದ ಅನೇಕ ಕಡೆ ಅವಳ ವಿಚಾರ, ಅಭಿಪ್ರಾಯಗಳು ಧ್ವನಿ ರೂಪದಲ್ಲಿ ವ್ಯಕ್ತವಾಗುತ್ತವೆ. ರಾಮನೊಂದಿಗೆ ಲಕ್ಷ್ಮಣನು ಕಾಡಿಗೆ ಹೋಗುವುದಕ್ಕೆ ಊರ್ಮಿಳೆಯು ಅನುಮತಿ ನೀಡುತ್ತಾಳೆ. ಮುಂದೆ ಹದಿನಾಲ್ಕು ವರ್ಷ ಅವಳು ತಪಸ್ವಿನಿಯಾಗಿರುವುದು ಕಂಡು ಬರುತ್ತದೆ. ಈ ವಿಚಾರಗಳು ಕವಿಯ ಮಾತುಗಳಲ್ಲಿ, ಸನ್ನಿವೇಶಗಳಲ್ಲಿ ಹಾಗೂ ಲಕ್ಷ್ಮಣನ, ರಾಮ, ಸೀತೆ ಇವರ ಪಾತ್ರಗಳಲ್ಲಿ ಅಡಕವಾಗಿವೆ. ಚಿತ್ರಕೂಟದಲ್ಲಿದ್ದಾಗ ಒಂದು ರಾತ್ರಿ ರಾಮನು ಲಕ್ಷ್ಮಣನನ್ನು ಕರೆದು ಅಯೋಧ್ಯೆಗೆ ಹಿಂತಿರುಗಲು ಹೇಳುತ್ತಾನೆ. ಇನ್ನೊಂದು ಸನ್ನಿವೇಶದಲ್ಲಿ ಸೀತೆಯು, ದೂರದ ಕಲ್ಲು ಬಂಡೆಯ ಮೇಲೆ ಯಾರೋ ಕುಳಿತಿರುವುದು ನೋಡಿ, ಸೌದೆಯನ್ನು ಹೊತ್ತು ತಂದು ವಿಶ್ರಮಿಸುತ್ತಿರುವ ಲಕ್ಷ್ಮಣನೇ ಊರ್ಮಿಳೆಯ ಬಗ್ಗೆ ಚಿಂತಿಸುತ್ತಿರ ಬಹುದೆಂದು ಹೇಳುತ್ತಾಳೆ. ರಾಮ ಮತ್ತು ಸೀತೆಗೆ ಊರ್ಮಿಳೆ, ಲಕ್ಷ್ಮಣರ ಬಗ್ಗೆ ಇರುವ ಕಾಳಜಿಯನ್ನು ಮತ್ತು ಊರ್ಮಿಳೆಯ ವಿಚಾರವನ್ನು ಈ ಸನ್ನಿವೇಶದ ಮೂಲಕ ಚಿತ್ರಿಸಿರುವುದು ಕಾಣಿಸುತ್ತದೆ. ಕುಂಭಕರ್ಣನ ಯುದ್ಧದ ಸಂದರ್ಭದಲ್ಲಿ ಪಾರ್ವತಿಯು ಶಿವನಿಗೆ ಹೇಳುವ ಮಾತುಗಳು ಊರ್ಮಿಳೆಯ ತಪಸ್ಸಿನ ವಿಚಾರವನ್ನು ಹೊಂದಿದೆ. ಹನುಮಂತನು ತಂದ ಸಂಜೀವಿನಿಯಿಂದ ಎಚ್ಚರಗೊಂಡ ಲಕ್ಷ್ಮಣನು, ಊರ್ಮಿಳಾ ಎಂದು ಕರೆಯುತ್ತ ಎದ್ದು ಮಡದಿಯ ತಪಃಶಕ್ತಿಯಿಂದ ತಾನು ಬದುಕಿದೆನೆಂದು ಹೇಳುತ್ತಾನೆ. ರಾಮ ಲಕ್ಷ್ಮಣರು ವನವಾಸದಿಂದ ಬಂದಾಗ ಮಾಂಡವಿಯು ಓಡಿ ಬಂದು, ಊರ್ಮಿಳೆಯನ್ನು ತಪಸ್ಸಿನಿಂದ ಎಚ್ಚರಗೊಳಿಸುತ್ತಾಳೆ. ಆಗ ತನ್ನ ಸಾಧನೆಯು ತೃಣ ಸಮಾನವೆಂದು ಹೇಳುವ ಊರ್ಮಿಳೆಯ ಮಾತುಗಳಲ್ಲಿ ವಿನಮ್ರತೆ ವ್ಯಕ್ತವಾಗುತ್ತದೆ. ಹೀಗೆ ಮೂರು ಸಂದರ್ಭಗಳಲ್ಲಿ ಊರ್ಮಿಳೆ ಪಾತ್ರವನ್ನು ಪರೋಕ್ಷವಾಗಿ ಚಿತ್ರಿಸಲಾಗಿದೆ. ಇದರಿಂದಾಗಿ ಸಹೃದಯರ

**Golden Resrach Thoughts**
**Vol -2 , ISSUE –IX, March - 2013**
**ISSN No-2031-5063** Available online at www.aygrt.isrj.org

ನಿರೀಕ್ಷೆಯ ಊರ್ಮಿಳೆಯ ಬದುಕಿನ ವಿಚಾರಗಳು ಕಾವ್ಯದಲ್ಲಿ ಕಾಣಿಸುವುದಿಲ್ಲ. ಮಂದಾರ ರಾಮಾಯಣದಲ್ಲಿ ಲಕ್ಷ್ಮಣನು ಊರ್ಮಿಳೆಯ ಅನುಮತಿ ಪಡೆಯುವ ಚಿತ್ರಣ ಇದೆ. ಆದರೆ ಸಹೃದಯರ ನಿರೀಕ್ಷೆಯ ಊರ್ಮಿಳೆಯ ಹದಿನಾಲ್ಕು ವರ್ಷಗಳ ಬದುಕಿನ ಚಿತ್ರಣ ಇಲ್ಲ. ಮಂದಾರ ರಾಮಾಯಣದಲ್ಲಿ ಲಂಕೆಯಿಂದ ರಾಮ ಲಕ್ಷ್ಮಣರು ಹಿಂತಿರುಗಿ ಅಯೋಧ್ಯೆಗೆ ಬಂದಾಗ, ಸ್ವಾಗತಿಸುವಾಗ ಮತ್ತು ಮುಂದೆ ನಡೆಯುವ ಸಭೆಯಲ್ಲಿ ಊರ್ಮಿಳೆಯು ಕಾಣಿಸಿಕೊಳ್ಳುತ್ತಾಳೆ. ಇದು ಗಮನಿಸಬೇಕಾದ ವಿಚಾರ, ಒಂದು ಕಾವ್ಯದಲ್ಲಿ ಎಲ್ಲಾ ವಿಷಯಗಳನ್ನು ಚಿತ್ರಿಸುವುದು ಕಷ್ಟ ಎಂಬದಕ್ಕೆ ಇದು ಉದಾಹರಣೆಯಾಗಿದೆ.

ವಾಲ್ಮೀಕಿ ರಾಮಾಯಣ ದಲ್ಲಿ ರಾಮನ ಪಟ್ಟಾಭಿಷೇಕಕ್ಕೆ ತೊಂದರೆಯಾದಾಗ ಲಕ್ಷ್ಮಣನು ತಂದೆಯನ್ನು ಕೊಲ್ಲುತ್ತೇನೆಂದು ಸಿಟ್ಟು ತೋರಿಸುತ್ತಾನೆ. ಬಳಿಕ ಕೈಕೆ, ಭರತರನ್ನು ನಿಂದಿಸುವುದು ಕಂಡುಬರುತ್ತದೆ. ಇಲ್ಲಿ ಲಕ್ಷ್ಮಣನು ಮುಂಗೋಪಿಯಾಗಿ ಕಾಣಿಸುತ್ತಾನೆ. ಮಾಯಾ ಜಿಂಕೆಯ ಸಂದರ್ಭದಲ್ಲಿ ಸೀತೆಗೆ ತಿಳಿಸಿ ಹೇಳುವ ಲಕ್ಷ್ಮಣನ ಪ್ರಯತ್ನ ಉತ್ತಮವಾಗಿದೆ. ನೀನಿಲ್ಲದೆ ನಿನಗಲ್ಲದೆ ಯಾವುದೂ ಬೇಡ ಎಂಬ ನಿಲುವಿನ ಲಕ್ಷ್ಮಣನು ಒಟ್ಟಿನಲ್ಲಿ ರಾಮನಿಗಾಗಿ ತನ್ನ ಇಡೀ ಬದುಕನ್ನು ಕಾಯ್ದಿರಿಸುತ್ತಾನೆ. ಹೀಗೆ ಶ್ರೇಷ್ಠ ವ್ಯಕ್ತಿಯಾಗಿ ಕಾಣಿಸುತ್ತಾನೆ.

ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ರಾಮನ ಪಟ್ಟಕ್ಕೆ ತೊಂದರೆ ಯಾದಾಗ ಲಕ್ಷ್ಮಣನಿಗೆ ಸಿಟ್ಟುಬರುತ್ತದೆ.

" ಕಾಮಾಂಧವಶನಾಗಿ ಲಂಪಟನೊರ್ವ
ಮತಿಗೆಟ್ಟ ಮುಪ್ಪುದೊರೆ ಹೆಂಗು ಸೊರ್ವಳ ಪದಕೆ
ದಾಸನಾಗುರುಳಿದರೆ, ಪೂಜ್ಯನೀ ರಾಮಚಂದ್ರಂ
ರಾಜ್ಯಮಂ ತ್ಯಜಿಸಿ ವಿಪಿನಾಂತರದ ವಾಸಮಂ
ಕೈ ಕೋಳ್ವುದೇಕೆ? ತೆಗೆ ತೆಗೆ ! ಧರ್ಮಮಿಲ್ಲದಾ
ನೀಚನೃಪನಂ ಪ್ರಜಾಶಕ್ತಿ ಸಂಹರಿಪಂತೆ
ಕೊಲೆಗರ್ಹನಲ್ತೆ ನಾಣಿಲಿ ತಂದೆ? ಪಿತನಾದೊಡೇಂ?
ಚಪಲಮತಿ ನೆರವಾದ ಪೆನ್ ನಿನಗೆ ನಾಂ
ನಿನ್ನೊಡನೆ ನಾಂ ಬಿಲ್ವಿಡಿದು ನಿಲಲ್, ನೋಳ್ವೆನಾಂ
ಸಾಕೇತ ಸಿಂಹಾಸನಕೆ ಸೆಣಸಿ ನಿಲ್ವರಾರ್"
ಶ್ರೀ ರಾಮಾಯಣ ದರ್ಶನಂ ಸಂಪುಟ1, ಸಂಚಿಕೆ 4, ಸಾಲು 63-73

ಇಲ್ಲಿ ಲಕ್ಷ್ಮಣನಿಗೆ ರಾಮನ ಬಗ್ಗೆ ಗೌರವ ಮತ್ತು ಅವನಿಗಾದ ಅನ್ಯಾಯಕ್ಕೆ ಸಿಟ್ಟು ಬರುವ ಚಿತ್ರಣ ಕಾಣಿಸುತ್ತದೆ. ಲಕ್ಷ್ಮಣನ ಮಾತುಗಳು ಮಿತವಾಗಿದ್ದರೂ ನಾಟುವ ಮಾತುಗಳಾಗಿವೆ.

ಮಂದಾರ ರಾಮಾಯಣದಲ್ಲಿ ರಾಮನ ಪಟ್ಟಕ್ಕೆ ಆದ ತೊಂದರೆಯನ್ನು ತಿಳಿದು ಲಕ್ಷ್ಮಣನು ಸಿಟ್ಟಿನಿಂದ ಮಾತನಾಡುತ್ತಾನೆ.

“------ ಈರೆನ್ ಪಿದಾಡ್ವಾವು
ನಕ್‌ಳೇರಂದೆಂಕ್ ತೊವೊಡೊರ. ತಿಂದಿ ಸೊ
ರ್ಕಡು ಕಣ್ಣ್ ತೋಜಂದಿ ಮರ್ತಿ ಮಂತರೆನತಿಗ
ಲೆಗ್ ಯಾನ್ ಪೋದಿತ್ತೆ ತೊರ್ಪಂದೆ ಕುಳ್ಳಾಯೆ
ಆಳೆ ನಮ್ಮಮ್ಮೆರೆ ಸೂಳೆ ಕೈಕೆನ ಸೊಂಟೊ
ನಿತ್ತೆ ನೆಗೆಪುವೆ ತಲೆಪುನ ಕ್‌ಳೇರ್?”

(ಮಂದಾರ ರಾಮಾಯಣ ಪುಟ 93, ಸಾಲು 416-421)
(ನಿಮ್ಮ ಹೊರಡಿಸುವವರ
ನಾರೆಂದೆನಗೆ ನೋಡ ಬೇಕೊಮ್ಮೆ. ತಿಂದಸೊ
ಕ್ಕಿನಲಿ ಕಣ್ ಕಾಣದಿಹ ಹುಚ್ಚಿಮಂಥರೆಯ ತೆಗ
ಲೆಗೆ ನಾನು ಹೋದೀಗ ಒದೆಯದುಳಿಯೆನು. ಅವಳು
ನಮ್ಮ ತಂದೆಯ ಸೂಳೆ ಕೈಕೆಯ ಸೊಂಟವ
ನ್ನೀಗ ಮುರಿಯುವೆ ತಡೆಯುವರಾರ್?)

ಲಕ್ಷ್ಮಣನು ಈ ರೀತಿ ಸಿಟ್ಟಿನಿಂದ ಕೈಕೆಯ ಕಡೆಗೆ ಹೊರಡುತ್ತಾನೆ. ಆಗ ರಾಮನು ಹೇಳಿದ ಸಮಾಧಾನದ ಮಾತುಗಳಿಗೆ ಗೌರವದಿಂದ ತಲೆತಗ್ಗಿಸುತ್ತಾನೆ. ಬಳಿಕ ಊರ್ಮಿಳೆಯ ಬಳಿಗೆ ಹೋಗುತ್ತಾನೆ. ಅಳುತ್ತಿದ್ದ ಊರ್ಮಿಳೆಯನ್ನು ಸಮಾಧಾನ ಪಡಿಸುತ್ತಾನೆ.

ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ಲಕ್ಷ್ಮಣನು ಉದ್ದೇಶ ಪೂರ್ವಕವಾಗಿ ಚಂದ್ರನಖಿಗೆ ಏನೂ ಮಾಡುವುದಿಲ್ಲ. ಮಂದಾರ ರಾಮಾಯಣದಲ್ಲಿ ಸೂರ್ಪನಖಿಯು ಪ್ರೇಮ ಭಿಕ್ಷೆ ಕೇಳಿದ್ದನ್ನು ಲಕ್ಷ್ಮಣ ಒಪ್ಪಲಿಲ್ಲ. ಆಗ ಅವಳು ಲಕ್ಷ್ಮಣನನ್ನು ಎತ್ತಿಕೊಂಡು ಹೋಗಲು ಪ್ರಯತ್ನಿಸಿದಾಗ ಕಿವಿ, ಮೂಗು ಕತ್ತರಿಸುತ್ತಾನೆ. ಇಲ್ಲಿಯೂ ವಿನಾಕಾರಣ ಲಕ್ಷ್ಮಣನು ಏನೂ ಮಾಡದಿರುವುದು ಉತ್ತಮವಾಗಿದೆ. ಎರಡು ಕಾವ್ಯಗಳಲ್ಲಿಯೂ ಮಾಯಾ ಜಿಂಕೆಯ ಸಂದರ್ಭದಲ್ಲಿ ಲಕ್ಷ್ಮಣನು ಸೀತೆಗೆ ತಿಳಿಸಿ ಹೇಳುವುದು ಉತ್ತಮವಾಗಿದೆ. ಮೂಲರಾಮಾಯಣಕ್ಕಿಂತ ಈ ಎರಡು ಕಾವ್ಯಗಳ ಲಕ್ಷ್ಮಣ ಪಾತ್ರವು ಸಹೃದಯರ ಗಮನ ಸೆಳೆಯುವ ಪಾತ್ರವಾಗಿ ಕಂಡು ಬರುತ್ತದೆ.

ವಾಲ್ಮೀಕಿ ರಾಮಾಯಣ ದ ಊರ್ಮಿಳೆಯ ಪಾತ್ರದ ಬಗ್ಗೆ ಸಹೃದಯರ ಭಾವನೆಗಳಿಗೆ ಉತ್ತರಿಸುವಂತೆ ಶ್ರೀ ರಾಮಾಯಣ ದರ್ಶನಂ ಕಾವ್ಯದ ಊರ್ಮಿಳೆಯ ಪಾತ್ರ ಚಿತ್ರಿಸಿಲಾಗಿದೆ. ಊರ್ಮಿಳೆಯ ಪಾತ್ರವನ್ನು ಪ್ರತ್ಯಕ್ಷವಾಗಿ ಚಿತ್ರಿಸಿದಾಗ ಉಂಟಾಗುವ ಸಮಸ್ಯೆಗಳನ್ನು ಪರಿಹರಿಸಲು ಪರೋಕ್ಷ ಚಿತ್ರಣ ತಂದಿರುವುದು ಯಶಸ್ವಿಯಾಗಿದೆ. ಮಂದಾರ ರಾಮಾಯಣದಲ್ಲಿ ನೇರವಾದ ಚಿತ್ರಣದಲ್ಲಿರುವ ಊರ್ಮಿಳೆಯ ಪಾತ್ರವು ಸಹೃದಯರ ಗಮನ ಸೆಳೆಯುತ್ತದೆ. ಲಕ್ಷ್ಮಣನೊಂದಿಗೆ ಅವಳಾಡುವ ಮಾತುಗಳಲ್ಲಿ ಕಾವ್ಯದ ಕೊನೆಗೆ ಅವಳು ಕಾಣಿಸಿಕೊಂಡ ಸಂದರ್ಭದಲ್ಲಿ ಅವಳ ಮಾತುಗಳು ಪಾತ್ರಕ್ಕೆ ಮೆರುಗನ್ನು ನೀಡಿದೆ.

**ಗ್ರಂಥ ಋಣ :**

1. ಶ್ರೀರಾಮಾಯಣ ದರ್ಶನಂ - ಕುವೆಂಪು
2. ಮಂದಾರ ರಾಮಾಯಣ – ಮಂದಾರ ಕೇಶವ ಭಟ್ಟ
3. ಶ್ರೀ ಮದ್ವಾಲ್ಮೀಕಿ ರಾಮಾಯಣಮ್ – ಎನ್. ರಂಗನಾಥ ಶರ್ಮ